**ದಿನಾಂಕ: 19-08-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಮುಂದುವರೆದ ಪಾಟೀ ಸವಾಲುಃ 11 ರಿಂದ 13, 15 ರಿಂದ 17 ನೇ ಪ್ರತಿವಾದಿ ಪರ ಶ್ರೀ.ಎಸ್ ಡಿ ಎಂ ವಕೀಲರಿಂದ :**

ಐಯ್ಯನಗೌಡ ಮತ್ತು ಶಿವನಗೌಡರವರು ನನ್ನ ಕಾಕಂದಿರು, ನಾಗನಗೌಡ ಮತ್ತು ಚನ್ನಬಸನಗೌಡ ನನ್ನ ದೊಡ್ಡಪ್ಪಂದಿರು. ನನ್ನ ದೊಡ್ಡಪ್ಪ ಚನ್ನಬಸನಗೌಡರವರು ಮನೆತನದ ಹಿರಿತನ ಮಾಡುತ್ತಿದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಆದರೆ ಸಾಕ್ಷಿಯು ಅವರೆ ಹಿರಿತನ ಮಾಡುತ್ತಿದ್ದರು ಎಂದು ಸ್ವತಃ ನುಡಿಯುತ್ತಾರೆ. 1984 ಮತ್ತು 2000 ನೇ ಇಸ್ವಿಯಂದು ಆದ ವಾಟ್ನಿ ಪ್ರಕಾರ ಅವರವರ ಹಿಸ್ಸೆಗೆ ಬಂದ ಆಸ್ತಿಗಳನ್ನು ಬ್ಯಾಂಕ್ ಗಳಲ್ಲಿ ಒತ್ತೆ ಇಡುದರ ಮೂಲಕ ಪ್ರತ್ಯೇಕವಾಗಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯ ಇರಬಹುದು ಆದರೆ ನಮ್ಮ ಕುಟುಂಬದಲ್ಲಿ ಯಾವುದೇ ಹಿಸ್ಸೆ ಆಗಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಮುಂದುವರೆದು ಸಾಕ್ಷಿಯು ನನ್ನ ದೊಡ್ಡಪ್ಪ ಚನ್ನಬಸನಗೌಡರವರೆ ನಿಂತು ಸಾಲ ಮಾಡಿಸುತ್ತಿದ್ದರು ಎಂದು ಸ್ವತಃ ನುಡಿಯುತ್ತಾರೆ. ಆ ವಾಟ್ನಿಯಂತೆ ಅವರವರ ಹಿಸ್ಸೆಗೆ ಬಂದ ಜಮೀನುಗಳಿಗೆ ಅವರುಗಳೆ ಬೆಳೆ ವಿಮೆ ಮಾಡಿಸುವುದು ಮತ್ತು ಬೆಳೆ ಪರಿಹಾರ ವನ್ನು ಅವರವರ ಖಾತೆಗೆ ಜಮಾ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿಯು ನನ್ನ ದೊಡ್ಡಪ್ಪ ಚನ್ನಬಸನಗೌಡರೆ ಮಾಡುತ್ತಿದ್ದರು ಎಂದು ಸ್ವತಃ ನುಡಿಯುತ್ತಾರೆ. ಆ ಹಿಸ್ಸೆಯಂತೆ ಆ ಹಿಸ್ಸೆದಾರರೆ ತಮ್ಮ ಪಾಲಿಗೆ ಬಂದ ಜಮೀನುಗಳಲ್ಲಿ ಸಾಲ ಪಡೆದು ಮತ್ತು ಕಟ್ಟುವುದು ಮಾಡುತ್ತಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ನನ್ನ ಕೇಸಿಗೆ ಅನುಕೂಲವಾಗಲೀ ಎಂಬ ಕಾರಣಕ್ಕಾಗಿ ಸುಳ್ಳು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಂದಲ್ಲಿ ನನ್ನ ದೊಡ್ಡಪ್ಪ ಚನ್ನಬಸನಗೌಡರವರೆ ಮನೆತನದ ವ್ಯವಹಾರ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಚನ್ನಬಸನಗೌಡರವರು ಎಂದೂ ಸಹ ಯಾವುದೇ ಚುನಾವಣೆಯಲ್ಲಿ ಸ್ಪರ್ದಿಸಿರಲಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ 4 ನೇ ಪುಟದಲ್ಲಿ ಚನ್ನಬಸನಗೌಡರೆ ರುದ್ರಗೌಡರ ಜೀವಿತ ಅವಧಿಯಲ್ಲಿ ಅವರವರ ಹೆಸರುಗಳಿಗೆ ಜಮೀನುಗಳನ್ನು ಖರೀದಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬಕ್ಕೆ ಕುಂಟನಹೊಸಳ್ಳಿ ಗ್ರಾಮ ಪಂಚಾಯತಿಗೆ ಸಂಬಂದಪಟ್ಟಂತೆ ಜಿಪಿಸಿ ನಂಬರ 42 ಖಾಲಿ ನಿವೇಶನ ಮತ್ತು 51, 52 ರ ಎರಡು ಹಂಚಿನ ಮನೆಗಳಿವೆ. ಜಿಪಿಸಿ ನಂಬರ 42 ರ ಆಸ್ತಿ ಶಿವನಗೌಡರವರು ಹೆಸರಿನಲ್ಲಿ ಮತ್ತು ಜಿಪಿಸಿ ನಂಬರ 52 ರ ಆಸ್ತಿ ಐಯ್ಯನಗೌಡರ ಹೆಸರಿನಲ್ಲಿದೆ. ಶಿವನಗೌಡರವರು ವಾಸವಾಗಿರುವ ಮನೆಯ ಚೆಕ್ಕುಬಂದಿಃ ಪೂರ್ವಕ್ಕೆ ಕಮಲವ್ವ ಕ್ಷೌರದ ರವರ ಮನೆ, ಪಶ್ಚಿಮಕ್ಕೆ ಐಯ್ಯನಗೌಡ ರವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಹಿತ್ತಲು ಮತ್ತು ಅದಕ್ಕೆ ಹೊಂದಿಕೊಂಡಂತೆ ರಸ್ತೆ ಇದೆ. ಈ ಮೇಲೆ ಹೇಳಲಾದ ಚೆಕ್ಕುಬಂದಿಯಲ್ಲಿರುವ ಆಸ್ತಿ ಶಿವನಗೌಡರವರ ಹೆಸರಿನಲ್ಲಿರುತ್ತದೆ. ಈ ಮೇಲೆ ಹೇಳಲಾದ ಆಸ್ತಿ ಜಿಪಿಸಿ ನಂಬರ 42 ಆಗಿರುವುದಿಲ್ಲ ಬದಲಾಗಿ 52 ಆಗಿರುತ್ತದೆ ಎಂದರೆ ಸರಿ. ಶಿವನಗೌಡರವರು ವಾಸವಾಗಿರುವ ಮನೆಯ ಪಶ್ಚಿಮ ದಿಕ್ಕಿಗೆ ಐಯ್ಯನಗೌಡರವರ ಮನೆ ಇರುತ್ತದೆ. ಐಯ್ಯನಗೌಡರವರು ವಾಸವಾಗಿರುವ ಮನೆಯ ಜಿಪಿಸಿ ನಂಬರ 51 ಆಗಿರುತ್ತದೆ. ಜಿಪಿಸಿ ನಂಬರ 51 ಮತ್ತು 52 ರ ಆಸ್ತಿ ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿವಾಗಿರುತ್ತದೆ. ಜಿ ಪಿ ಸಿ ನಂಬರ 42 ರ ಆಸ್ತಿ ನಮ್ಮ ಕುಟುಂಬಕ್ಕೆ ಹೇಗೆ ಬಂತು ಎಂಬುದು ನನಗೆ ಈಗ ಹೇಳಲಾಗುವುದಿಲ್ಲ. ಜಿ ಪಿ ಸಿ ನಂಬ ರ 42 ರ ಆಸ್ತಿ ನಾಗನಗೌಡರವರು ಖರೀದಿಗೆ ಹಿಡಿದ ಆಸ್ತಿ ಎಂದರೆ ಸರಿಯಲ್ಲ. ವಾಟ್ನಿಯಾದ ಸಂದರ್ಭದಲ್ಲಿ ನಾಗನಗೌಡರವರು ಜಿ ಪಿ ಸಿ ನಂಬರ 42 ಅನ್ನು ಖರೀದಿಸಿದ ಕಾರಣ ಅವರಿಗೆ ಬಿಟ್ಟುಕೊಟ್ಟು ಜಿ ಪಿ ಸಿ ನಂಬರ 51 ಅನ್ನು ಐಯ್ಯನಗೌಡರವರಿಗೂ ಜಿ ಪಿ ಸಿ ನಂಬರ 52 ರ ಆಸ್ತಿಯನ್ನು ಶಿವನಗೌಡರವರ ಹೆಸರಿಗೂ ಬಿಟ್ಟಕೊಟ್ಟರು ಎಂದರೆ ಸರಿಯಲ್ಲ. ಜಿ ಪಿ ಸಿ ನಂಬರ 42 ಕ್ಕೆ ಹೊಂದಿಕೊಂಡಂತೆ ರಿ ಸ ನಂಬರ 6 ರ ಆಸ್ತಿ ವಿಸ್ತೀರ್ಣ 1 ಎಕರೆ 8 ಗುಂಟೆ ಇದೆ ಎಂದರೆ ಸರಿ. ಆ ಸಂದರ್ಭದಲ್ಲಿ ನಾಗನಗೌಡರವರಿಗೆ ಮತ್ತು ನನ್ನ ತಂದೆಗೆ ಮನೆ ಕೊಡದೇ ಇರುವ ಕಾರಣ ರಿ ಸ ನಂಬರ 6 ರ 1 ಎಕರೆ 8 ಗುಂಟೆ ಜಮೀನಿನಲ್ಲಿ ತಲಾ ಅರ್ಧದಷ್ಟು ಆಸ್ತಿಯನ್ನು ಇಬ್ಬರಿಗೂ ಬಿಟ್ಟುಕೊಟ್ಟರು ಎಂದರೆ ಸರಿಯಲ್ಲ. ಆ ಪ್ರಕಾರವಾಗಿ ರಿ ಸ ನಂಬರ 6 ರಲ್ಲಿ ಜಿಪಿಸಿ ನಂಬರ 42 ರ ಕಡೆಗಾದಂತೆ ಉತ್ತರ ದಿಕ್ಕಿನ ಅರ್ಧ ಭಾಗವನ್ನು ನಾಗನಗೌಡರವರು ಹಾಗು ದಕ್ಷಿಣಕ್ಕೆ ಇರುವ ಅರ್ದ ಭಾಗದ ಆಸ್ತಿಯನ್ನು ನನ್ನ ತಂದೆ ಮತ್ತು ನಾವುಗಳೆ ವಹಿವಾಟು ಮಾಡುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ಶಿವನಗೌಡರವರು ನಾಗನಗೌಡರವರ ವಾರಸುದಾರರು ಮತ್ತು ಚನ್ನಬಸನಗೌಡರವರ ವಾರಸುದಾರರು ಹಾಗು ಐಯ್ಯನಗೌಡ ಹಾಗು ಆತನ ಮಕ್ಕಳುಗಳ ವಿರುದ್ಧ ಹಾನಗಲ್ಲನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 122/2018 ರಂತೆ ಶಾಶ್ವತ ಪ್ರತಿಬಂಧಕಾಜ್ಞೆ ದಾವೆ

ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಹಿಂದೆ ನಮ್ಮ ಕುಟುಂಬದಲ್ಲಿ ವಾಟ್ನಿಯಾಗಿದ್ದು, ಅದರಂತೆ ಅವರವರ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ವಹಿವಾಟು ಮಾಡುತ್ತಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ವಾಟ್ನಿಯಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹಾನಗಲ್ಲ ಶಹರದಲ್ಲಿರುವ ಎರಡು ಆಸ್ತಿಗಳು ಸಹ ಕೂಡಿಯೇ ಇದ್ದು, ಅದರ ಚೆಕ್ಕಬಂದಿಃ ಪೂರ್ವಕ್ಕೆ ರಸ್ತೆ, ಉತ್ತರಕ್ಕೆ ಯಾರದೋ ಗೋಡೆ ಇದೆ, ಪಶ್ಚಿಮಕ್ಕೆ ಪಟ್ಟಣಶೆಟ್ಟಿರವರ ಮನೆ, ದಕ್ಷಿಣಕ್ಕೆ ಖಾಲಿ ನಿವೇಶನ ಇದೆ. ಈ ಎರಡು ಆಸ್ತಿಗಳನ್ನು ಚನ್ನಬಸನಗೌಡರವರು ತನ್ನ ವ್ಯವಹಾರದ ಅನುಕೂಲಕ್ಕಾಗಿ ಖರೀದಿ ಹಿಡಿದ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯಪ್ರಮಾಣ ಪತ್ರದ ಪುಟ ಸಂಖ್ಯೆ 5 ರಲ್ಲಿ ಈ ಎರಡು ಆಸ್ತಿಗಳನ್ನು ರುದ್ರಗೌಡರವರು ತನ್ನ ಮೊಮ್ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಖರೀದಿಗೆ ಹಿಡಿದರು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಕುಂಟನಹೊಸಳ್ಳಿ ಗ್ರಾಮದ ಜಿ ಪಿ ಸಿ ನಂಬರ 42 ಮತ್ತು ಅದಕ್ಕೆ ಹೊಂದಿಕೊಂಡಂತೆ ಇರುವ ರಿ ಸ ನಂಬರ 6 ರ ಆಸ್ತಿಯಲ್ಲಿ ಹಿಂದಿನಿಂದಲೂ ಸಹ ಕಣಕ್ಕಾಗಿ ಉಪಯೋಗಿಸುತ್ತಾ ಬಂದಿರುತ್ತಾರೆ ಎಂದರೆ ಸರಿ. ಆ ಕಣದಲ್ಲಿ ಭತ್ತ, ಜೋಳ ಹಾಗು ಬೆಳೆದ ಬೆಳೆಗಳನ್ನು ಶೇಕರಣೆ ಮಾಡುವ ಉದ್ದೇಶಕ್ಕಾಗಿ ಉಪಯೋಗಿಸುತ್ತಿದ್ದರು ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ 6 ನೇ ಪುಟದಲ್ಲಿ 330/1 ರಲ್ಲಿ ಭತ್ತ ಶೇಕರಣೆ ಮಾಡುವ ಸಲುವಾಗಿ ಕಣ ಮಾಡಲಾಗಿತ್ತು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ರಿ.ಸ ನಂಬರ 330/1 ರ ಆಸ್ತಿಯಲ್ಲಿ ಚನ್ನಬಸನಗೌಡರವರ ಮಗಳಾದ ಶಶಿಕಲಾರವರ ಮದುವೆ ಮಾಡುವ ಉದ್ದೇಶದಿಂದ 7 ಗುಂಟೆ ಜಮೀನನ್ನು ಸಹದೇವಪ್ಪ ಕೋಟಿ ಹಾಗು 1 ಗುಂಟೆ ಜಮೀನನ್ನು ಪ್ರತಿವಾದಿ 23 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಆಸ್ತಿಯನ್ನು ಜೂನ್ 2004 ರಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚನ್ನಬಸನಗೌಡರವರು ತನ್ನ ಕುಟುಂಬದಲ್ಲಿ ಹಿಸ್ಸೆ ಆದ ನಂತರ ದಿಃ03-03-2005 ರಂದು ದಾವಾ ಶೆಡ್ಯೂಲ್ ಸಿ-5 ರ ಆಸ್ತಿಯನ್ನು ಖರೀದಿಗೆ ಹಿಡಿದರು ಎಂದರೆ ಸರಿಯಲ್ಲ. ಈ ಆಸ್ತಿಗೆ ಸಂಬಂದಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಆಸ್ತಿಯ ಮೂಲ ಮಾಲೀಕರ ಹೆಸರು ನನಗೆ ನೆನಪಿಲ್ಲ. ಈ ಆಸ್ತಿಯು ಚನ್ನಬಸನಗೌಡರವರ ಸ್ವಯಾರ್ಜಿತ ಆಸ್ತಿಯಾಗಿದ್ದರೂ ಸಹ ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಇ-10 ರ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಈ ಆಸ್ತಿಯಲ್ಲಿ ಗೋಡೌನ್ ಮತ್ತು ಖಾಲಿ ನಿವೇಶನ ಇದೆ. ಈ

ಆಸ್ತಿಯು ಈಗ ಅಜ್ಜನಗೌಡರವರ ಹೆಸರಿನಲ್ಲಿದೆ. ಈ ಆಸ್ತಿಯು ಅಜ್ಜನಗೌಡರವರಿಗೆ ಹೇಗೆ ಬಂತು ಎಂದು ಈಗ ಹೇಳಲಾಗುವುದಿಲ್ಲ. ಈ ರೀತಿ ಆ ಆಸ್ತಿ ಯಾವ ಇಸ್ವಿಯಲ್ಲಿ ಬಂತು ಎಂಬುದು ನನಗೆ ನೆನಪಿಲ್ಲ. ಅಜ್ಜನಗೌಡರವರು ಈ ಹಿಂದೆ ವ್ಯವಸಾಯ ಮಾಡುತ್ತಿದ್ದು, ಈಗ ಭತ್ತದ ವ್ಯಾಪಾರ ಮಾಡುತ್ತಾರೆ ಎಂದು ಗೊತ್ತಾಯಿತು. ಕಳೆದ 7-8 ವರ್ಷಗಳಿಂದ ಭತ್ತದ ವ್ಯಾಪಾರ ಮಾಡುತ್ತಿದ್ದಾರೆ ಎಂದು ಗೊತ್ತಾಯಿತು. ಅಜ್ಜನಗೌಡರವರು ತನ್ನ ತಂದೆ ಚನ್ನಬಸನಗೌಡ ಬದುಕಿದ್ದಾಗಲೂ ಸಹ ಹಾಗು ಅಜ್ಜನಗೌಡ ವಯಸ್ಕನಾದಾಗಿನಿಂದಲೂ ಸಹ ಚನ್ನಬಸನಗೌಡ ರವರ ಜೊತೆ ಭತ್ತದದ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಆಸ್ತಿಯನ್ನು ಬೈಚವಳ್ಳಿಯಲ್ಲಿಯೇ ಏಕೆ ಹಿಡಿದರು ಎಂಬುದು ನನಗೆ ಗೊತ್ತಿಲ್ಲ. ಅಜ್ಜನಗೌಡರವರು ಚಿಕ್ಕನಿಂದಲೂ ಸಹ ಬೈಚವಳ್ಳಿಯಲ್ಲಿಯ ಅಕ್ಕಪಕ್ಕದಲ್ಲಿ ಭತ್ತದ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಇತ್ತೀಚೆಗೆ ಮಾಡುತ್ತಿರುವ ವಿಚಾರ ನನಗೆ ಗೊತ್ತು. ಆದರೆ ಹಿಂದೆ ಮಾಡುತ್ತಿರಲಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಬೈಚವಳ್ಳಿಯ ಅಕ್ಕಪಕ್ಕದ ಗ್ರಾಮದಿಂದ ಖರೀದಿಸಿದ ಭತ್ತವನ್ನು ಶೇಕರಣೆ ಮಾಡುವ ಉದ್ದೇಶದಿಂದ ತನ್ನ ಸ್ವಂತ ಗಳಿಕೆಯಿಂದ ಬಂದ ಹಣದಿಂದ ಈ ಆಸ್ತಿಯನ್ನು ಅಜ್ಜನಗೌಡರವರು 2012 ರಲ್ಲಿ ಖರೀದಿಸಿದ್ದರು ಎಂದರೆ ಸರಿಯಲ್ಲ. ಈ ಆಸ್ತಿಯನ್ನು ಅಜ್ಜನಗೌಡರ ಸ್ವಯಾರ್ಜಿತ ಆಸ್ತಿಯಾಗಿದ್ದರೂ ಸಹ ಘರಾಣೆದ ಆಸ್ತಿ ಎಂದು ಈ ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸಿ-9 ರ ಆಸ್ತಿ ಯಾರ ಹೆಸರಿನಲ್ಲಿದೆ ಮತ್ತು ಹೇಗೆ ಬಂತು ಎಂಬುದು ನನಗೆ ನೆನಪಿಲ್ಲ. ಈ ಆಸ್ತಿಯ ಬಗ್ಗೆ ದಾಖಲೆಗಳನ್ನು ನೋಡಿ ಮಾಹಿತಿ ಪಡೆದುಕೊಂಡಿದ್ದೆನು, ಆದರೆ ಈಗ ಅದು ನೆನಪಿಲ್ಲ. ಈ ಆಸ್ತಿಗೆ ಸಂಬಂದಪಟ್ಟಂತೆ ನಿಪಿ.14 ಅನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ಆಸ್ತಿಯು ಚನ್ನಬಸನಗೌಡ ಪಾಟೀಲ ರವರ ಹೆಸರಿನಲ್ಲಿ ಇರುತ್ತದೆ. ಈ ಆಸ್ತಿ ಚನ್ನಬಸನಗೌಡ ರವರಿಗೆ ಹೇಗೆ ಬಂತು ಎಂಬುದು ಈಗ ನನಗೆ ನೆನಪಿಲ್ಲ. ಈ ಆಸ್ತಿಯನ್ನು ಚನ್ನಬಸನಗೌಡರವರು ತನ್ನ ಸ್ವಂತ ಭತ್ತದ ವ್ಯಾಪಾರದಿಂದ ಬಂದ ಹಣ ಮತ್ತು ಇತರೆ ಹಣದಿಂದ ನಮ್ಮ ಕುಟುಂಬದಲ್ಲಿ ವಾಟ್ನಿಯಾದ ನಂತರ ದಿಃ27-02-2003 ರಂದು ಅದರ ಮೂಲ ಮಾಲೀಕರಾದ ಸೋಮನಗೌಡ ಅಡಿವೆಪ್ಪಗೌಡರವರಿಂದ ಖರೀದಿಸಿದರು ಎಂದರೆ ಸರಿಯಲ್ಲ. ಈ ಆಸ್ತಿಯ ಚನ್ನಬಸನಗೌಡರವರ ಸ್ವಯಾರ್ಜಿತ ಆಸ್ತಿಯಾಗಿದ್ದರೂ ಸಹ ಒಟ್ಟು ಘರಾಣೆದ ಆಸ್ತಿ ಎಂದು ಗೈರು ಫಾಯಿದೆ ತೆಗೆದುಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಸಿ-1 ರ ಆಸ್ತಿಯ ಉತಾರವನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆ ಆಸ್ತಿ ಯಾರ ಹೆಸರಿನಲ್ಲಿದೆ ಎಂಬುದು ಈಗ ನನಗೆ ನೆನಪಿಲ್ಲ. ಈ ಆಸ್ತಿ ಮೂಲತಃ ಯಾರ ಆಸ್ತಿ ಎಂಬುದು ಸಹ ನನಗೆ ಗೊತ್ತಿಲ್ಲ. ಈ ಆಸ್ತಿಯನ್ನು 1 ನೆ ಪ್ರತಿವಾದಿ ತನ್ನ ಸ್ವಂತ ಗಳಿಸಿದ ಹಣದಿಂದ ದಿ:02-05-2000 ರಂದು ಮೂಲ ಮಾಲೀಕರು ದ್ಯಾಮನಗೌಡ ಶಂಕರಗೌಡ ಅಡಿವೆಪ್ಪಗೌಡರವರಿಂದ ಖರೀದಿಸಿದರು ಎಂದರೆ ಸರಿಯಲ್ಲ. ಈ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಈ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದರೂ ಸಹ ಒಟ್ಟು ಘರಾಣೆದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ರೀತಿ ದಾವಾ ಸಿ-6 ರ ಆಸ್ತಿ ಯಾರ ಹೆಸರಿನಲ್ಲಿದೆ ಎಂಬುದು ನನಗೆ ನೆನಪಿಲ್ಲ. ಆದರೆ ಈ ಬಗ್ಗೆ ಉತಾರ ಮತ್ತು ಡ ಅನ್ನು ಹಾಜರುಪಡಿಸಿರುತ್ತೇನೆ. ಈ ಸ್ವತ್ತಿನ ಚೆಕ್ಕಬಂದಿಯೂ ಸಹ ನನಗೆ ಗೊತ್ತಿಲ್ಲ. ಈ ಆಸ್ತಿಯನ್ನು ಕುಂಟನಹೊಸಳ್ಳಿ ಗ್ರಾಮದ ಪೂರ್ವ ಭಾಗಕ್ಕೆ ಇದೆ. ಈ ಆಸ್ತಿಯು ಮೂಲತಃ ಸುಭಾಶ ಗದಿಗೆಪ್ಪ ಅರಳೇಶ್ವರರವರ ಆಸ್ತಿ ಎಂದರೆ ಇರಬಹುದು ಆದರೆ ನನಗೆ ನೆನಪಿಲ್ಲ. ಈ ಆಸ್ತಿಯನ್ನು 1 ನೇ ಪ್ರತಿವಾದಿ ತನ್ನ ಸ್ವಯಾರ್ಜಿತ ಆದಾಯದಿಂದ ದಿ:16-08-2010 ರಂದು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರೂ ಸಹ ಈ ಆಸ್ತಿಯು ಘರಾಣೆದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಆಸ್ತಿಯು ಕುಂಟನಹೊಸಳ್ಳಿ ಗ್ರಾಮದ ಪೂರ್ವ ದಿಕ್ಕಿನಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ, ಆ ಆಸ್ತಿಯು ಆ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಇದೆ ಎಂದರೆ ಸರಿಯಲ್ಲ.

ದಾವಾ ಸಿ-3 ರ ಆಸ್ತಿ ಮೂಲತಃ ಯಾರ ಹೆಸರಿನಲ್ಲಿದೆ ಎಂಬುದು ನನಗೆ ನೆನಪಿಲ್ಲ. ಸಾಕ್ಷಿಯು ಈಗ ನನ್ನ ಕಾಕಾ ಐಯ್ಯನಗೌಡ ರವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಈ ಆಸ್ತಿ ಐಯ್ಯನಗೌಡರವರಿಗೆ ಹೇಗೆ ಬಂತು ಎಂಬುದು ನನಗೆ ಗೊತ್ತಿಲ್ಲ. ಈ ಆಸ್ತಿಯ ಚೆಕ್ಕಬಂದಿಯೂ ಸಹ ನನಗೆ ಗೊತ್ತಿಲ್ಲ. ಈ ಆಸ್ತಿಗೆ ಹೊಂದಿಕೊಂಡಂತೆ ನಮ್ಮ ಕುಟುಂಬಕ್ಕೆ ಸೇರಿದ ಸರ್ವೇ ನಂಬರ 10 ರ ಜಮೀನು ಇರುತ್ತದೆ. ಈ ಆಸ್ತಿ ಮೂಲತಃ ಚಂದ್ರಪ್ಪಗೌಡ ಚಂದ್ರಗೌಡ ಅಡಿವೆಪ್ಪಗೌಡರ ಆಸ್ತಿ ಎಂದರೆ ಸರಿ. ಈ ಆಸ್ತಿಯನ್ನು ಶಿವನಗೌಡರವರು ತಮ್ಮ ಕುಟುಂಬದ ವಾಟ್ನಿಯಲ್ಲಿ ಬಂದಂತಹ ಆಸ್ತಿಗಳ ಆದಾಯದಿಂದ ದಿ:15-04-2000 ದಂದು ಖರೀದಿಗೆ ಹಿಡಿದಿದ್ದಾರೆ ಎಂದರೆ ಸರಿಯಲ್ಲ. ಈ

ಆಸ್ತಿಯು ಸಹ ಶಿವನಗೌಡರ ಸ್ವಯಾರ್ಜಿತ ಆಸ್ತಿಯಾಗಿದ್ದರೂ ಸಹ ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದು ತಪ್ಪಾಗಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಸಿ-11 ರ ಆಸ್ತಿ ಮೂಲತಃ ಯಾರ ಆಸ್ತಿ ಎಂಬುದು ನನಗೆ ಗೊತ್ತಿಲ್ಲ. ಈ ಆಸ್ತಿಯನ್ನು ಚನ್ನಬಸನಗೌಡರ ಹೆಸರಿನಲ್ಲಿಯೇ ಖರೀದಿ ಮಾಡಲಾಗಿರುತ್ತದೆ. ಆದರೆ ಯಾವ ವರ್ಷ ಖರೀದಿಸಿದರು ಎಂಬುದು ನನಗೆ ಗೊತ್ತಿಲ್ಲ. ಈ ಆಸ್ತಿಯ ಚೆಕ್ಕಬಂದಿ ನನಗೆ ನೆನಪಿಲ್ಲ. ಈ ಆಸ್ತಿಯು ಮೂಲತಃ ಮಕ್ಬೂಲ್ ಅಹ್ಮದ್ ಖಾದರಸಾಬ್ ಹೋತ್ನಳ್ಳಿರವರ ಆಸ್ತಿ ಎಂದರೆ ನನಗೆ ನೆನಪಿಲ್ಲ. ಈ ಆಸ್ತಿಯನ್ನು 12 ನೇ ಪ್ರತಿವಾದಿ 2000 ನೇ ಇಸ್ವಿಯಲ್ಲಿ ಮಕ್ಬೂಲ್ ಅಹ್ಮದ್ ಹೊತ್ನಳ್ಳಿರವರಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಈ ಆಸ್ತಿ 12 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದರೂ ಸಹ ಒಟ್ಟು ಘರಾಣೆದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸಿ-11 ರ ಆಸ್ತಿಯ ಉಳಿದ ಆಸ್ತಿಯನ್ನು ಪ್ರತಿವಾದಿ 13 ಮತ್ತು 22 ರವರು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಈ ಆಸ್ತಿಗಳನ್ನು ಪ್ರತಿವಾದಿ 13 ಮತ್ತು 22 ರವರು ತಮ್ಮ ಸ್ವಂತ ಗಳಿಸಿದ ಆದಾಯದಿಂದ ಖರೀದಿಸಿದ ಆಸ್ತಿಯಾಗಿದ್ದರೂ ಸಹ ಅವುಗಳನ್ನು ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ರೀತಿ ದಾವಾ ಸಿ-2 ರ ಆಸ್ತಿ ಯಾರ ಹೆಸರಿನಲ್ಲಿದೆ ಮತ್ತು ಹೇಗೆ ಬಂತು ಎಂಬುದು ನನಗೆ ನೆನಪಿಲ್ಲ. ಈ ಬಗ್ಗೆ ಡ ವನ್ನು ನೋಡಿರುತ್ತೇನೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಆಸ್ತಿಯನ್ನು 2 ನೇ ಪ್ರತಿವಾದಿ ದಿಃ02-05-2000 ರಂದು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಆ ಆಸ್ತಿಯು ಆತನ ಸ್ವಯಾರ್ಜಿತ ಆಸ್ತಿಯಾಗಿದ್ದರೂ ಸಹ ಘರಾಣೆದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚನ್ನಬಸನಗೌಡರ ಮಕ್ಕಳುಗಳ ನಡುವೆ ವೈಮನಸ್ಸು ಉಂಟಾದ ಕಾರಣ ಅವರ ಸ್ವಯರ್ಜಿತ ಮತ್ತು ಪತ್ರಾರ್ಜಿತ ಆಸ್ತಿಗಳ ಮೇಲೆ ಹಾನಗಲ್ಲ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ ನಂಬರ 118/2015 ಅನ್ನು ದಾವೆ ಸಲ್ಲಿಸಿದ್ದರು ಎಂಬುದು ನನಗೆ ಗೊತ್ತಿಲ್ಲ. ಆ ದಾವೆಯನ್ನು ಚನ್ನಬಸನಗೌಡರ ಮಗ ಬಸನಗೌಡರವರು ಇತರೆ ತನ್ನ ಸಹೋದರ ವಿರುದ್ಧ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನನ್ನ ಗಂಡನ ಮೊದಲನೇ ಹೆಂಡತಿಯಾದ ಚಂದನಾರವರು ಸಹ 5 ನೇ ಪ್ರತಿವಾದಿಯಾಗಿದ್ದರು ಎಂದರೆ ನನಗೆ

ಗೊತ್ತಿಲ್ಲ. ಆ ದಾವೆ ಸಲ್ಲಿಸುವ ಕಾಲಕ್ಕೆ ಚಂದನಾರವರು 9 ವರ್ಷದ ಅಪ್ರಾಪ್ತ ವಯಸ್ಕಳಾಗಿದ್ದು, ನನ್ನ ಗಂಡ ಅಲ್ಪವಯಿ ಸಂರಕ್ಷಕರಾಗಿದ್ದರು ಎಂದರೆ ಸರಿ.

(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ